# ನಾಗಭೂಷಣ್ ಹಾಸ್ಯದ ಸೂತ್ರ

ಯಾವುದೇ ಪಾತ್ರಕ್ಕೂ ಸೈ ಎನ್ನುವಂಥ ನಟನೆ, ಮ್ಯಾನರಿಸಂನಿಂದ ಗುರುತಿಸಿಕೊಂಡಿರುವ ನಟ ನಾಗಭೂಷಣ್ ಅಭಿನಯದ 'ವಿದ್ಯಾಪತಿ' ಸಿನಿಮಾ ಬಿಡುಗಡೆಯಾಗುತ್ತಿದೆ. ಉತ್ತಮ ಮನರಂಜನಾ ಸಿನಿಮಾಗಳ ಭಾಗವಾಗುವುದು ಎಂದಿಗೂ ತಮ್ಮ ಆದ್ಯತೆ ಎನ್ನುವ ಅವರು, ತಮ್ಮ ಸಿನಿಮಾ ಜೀವನದ ಕುರಿತು 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

■ **ಸುಮಲತಾ ಎನ್.**



◆ **'ವಿದ್ಯಾಪತಿ'ಯಲ್ಲಿ ನಾಗಭೂಷಣ್ ಹೇಗೆ ಕಾಣಿಸಿಕೊಂಡಿದ್ದಾರೆ? ಈ ಸಿನಿಮಾದಿಂದ ಜನ ಏನು ನಿರೀಕ್ಷಿಸಬಹುದು?**

ಸಿನಿಮಾದಲ್ಲಿ ನನ್ನದು ವಿದ್ಯಾಳ ಪತಿ ಪಾತ್ರ. ಸೂಪರ್‌ಸ್ಟಾರ್ ಹೆಂಡತಿಯೇ ಗಂಡನ ಐಡೆಂಟಿಟಿ ಎನಿಸುವ ಪಾತ್ರ. ನಾನು ಈ ಸಿನಿಮಾವನ್ನು 'ಎಮೊಕಾಮ್ ಆ್ಯಕ್ಷನ್' ಜಾನರ್ ಎಂದು ಹೇಳಿಕೊಳ್ಳುತ್ತೇನೆ. ಎಮೋಷನಲ್, ಕಾಮಿಡಿ ಹಾಗೂ ಆ್ಯಕ್ಷನ್ ಈ ಮೂರೂ ಅಂಶಗಳು ಮಿಳಿತವಾಗಿವೆ. ಏನನ್ನಾದರೂ ಹೇಳುವಾಗ ಅದರಲ್ಲಿ ಹಾಸ್ಯ ಇದ್ದರೆ ಜನರಿಗೆ ಬೇಗ ತಲುಪುತ್ತದೆ. ಎಮೋಷನ್ ಇರಬಹುದು, ಆ್ಯಕ್ಷನ್ ಇರಬಹುದು, ಅದರ ಜೊತೆ ಸ್ವಲ್ಪ ಹಾಸ್ಯ ಇದ್ದರೆ ಜನ ಆರಾಮಾಗಿ ಸ್ವೀಕರಿಸುತ್ತಾರೆ. ಈಗ ಬೇಸಿಗೆ ರಜೆ. ಮಕ್ಕಳನ್ನೂ ಕರೆದುಕೊಂಡು ಒಳ್ಳೆಯ ಸಿನಿಮಾ ನೋಡಬೇಕು ಅನ್ನುವವರಿಗೆ ಒಳ್ಳೆಯ ಆಯ್ಕೆ.

◆ **ಹಾಸ್ಯಪಾತ್ರಗಳಲ್ಲೇ ಹೆಚ್ಚು ಕಾಣಿಸಿಕೊಂಡಿರುವ ನಿಮಗೆ ಟೈಪ್‌ಕಾಸ್ಟ್ ಆಗುವ ಆತಂಕ ಎದುರಾಗಿದೆಯಾ? ಯಾವ ರೀತಿ ಪಾತ್ರಗಳನ್ನು ಎಕ್ಸ್‌ಪ್ಲೋರ್ ಮಾಡುವಾಸೆ?**

ನನಗೆ ಎಲ್ಲ ರೀತಿಯ ಪಾತ್ರಗಳನ್ನು ಪ್ರಯೋಗಿಸುವ ಆಸೆಯಿದೆ. ನಟನಾದವನು ಖಂಡಿತ ಏಕತಾನತೆಯ ಪಾತ್ರಗಳನ್ನು ಮುರಿಯಲೇಬೇಕು. ಟೈಪ್‌ಕಾಸ್ಟ್ ಆಗುತ್ತಿದ್ದೇವೆ ಎಂಬ ಭಾವನೆ ಬರುತ್ತಿದ್ದಂತೆಯೇ ಹಾದಿ ಹೊರಳಿಸಬೇಕು. 'ಟಗರು ಪಲ್ಯ' ಸಿನಿಮಾದಲ್ಲಿ ಹಾಸ್ಯದ ಜೊತೆ ಎಮೋಷನ್ ಕೂಡ ಇತ್ತು. ಅಲ್ಲಿ ನಾನು ಸೈ ಎನ್ನಿಸಿಕೊಂಡೆ. 'ವಿದ್ಯಾಪತಿ' ಸಿನಿಮಾದಲ್ಲಿ ಎಮೋಷನ್ ಹಾಗೂ ಆ್ಯಕ್ಷನ್ ಇದೆ. ಇಲ್ಲಿ ಕೂಡ ನಾನು ಸೈ ಅನ್ನಿಸಿಕೊಳ್ಳಬೇಕು.

ಈ ವಿಷಯದಲ್ಲಿ ನಾನು ಯಾವಾಗಲೂ ನಮ್ಮ ಹಳೆಯ ಪೋಷಕ ನಟರನ್ನು ನೆನಪಿಸಿಕೊಳ್ಳುತ್ತೇನೆ. ದೊಡ್ಡಣ್ಣ, ಲೋಕೇಶ್ ಮುಂತಾದ ಹಲವು ಕಲಾವಿದರು ಯಾವುದೇ ಜಾನರ್‌ಗೆ ಅಂಟಿ ಕೂರಲಿಲ್ಲ. ಕಾಮಿಡಿ ಮಾಡುತ್ತಿದ್ದರು, ವಿಲನ್‌ಗಳಾಗುತ್ತಿದ್ದರು, ಯಾವುದೇ ಪಾತ್ರ ಕೊಟ್ಟರೂ ನಟಿಸಿಬಿಡುತ್ತಿದ್ದರು. ನಟರು ಎಂದರೆ ಎಲ್ಲ ರೀತಿಯ ಪಾತ್ರಗಳನ್ನು ಮಾಡುತ್ತಾ ಸಾಗಬೇಕು.

◆ **ಕನ್ನಡ ಸಿನಿಮಾರಂಗದಲ್ಲಿ ಈಚೆಗೆ ನೀವು ಕಂಡಂಥ ಹೊಸ ಪ್ರಯೋಗಗಳು?**

ಕಾದಂಬರಿ, ಕಥೆ ಆಧರಿತ ಸಿನಿಮಾಗಳು ಇಲ್ಲವೇ ಇಲ್ಲವೇನೋ ಎನ್ನುವ ಸಮಯದಲ್ಲಿ 'ಡೇರ್ ಡೆವಿಲ್ ಮುಸ್ತಫಾ'ದಂಥ ಮನರಂಜನಾತ್ಮಕ ಸಿನಿಮಾ ಹೊಸ ಪ್ರಯೋಗ ಎನಿಸಿತು. ಪುಟ್ಟ ಕಥೆಯಿಟ್ಟುಕೊಂಡು ಮನರಂಜನಾತ್ಮಕವಾಗಿ ಸಿನಿಮಾ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿತು. 'ಹಾಸ್ಟೆಲ್ ಹುಡುಗರು' ತಾಂತ್ರಿಕ ಅಂಶಗಳಲ್ಲಿ ಬಹಳ ಇಷ್ಟವಾದ, ಹೊಸ ರೀತಿಯ ಸಿನಿಮಾ. ನಾನು ಅಭಿನಯಿಸಿದ್ದ 'ಟಗರು ಪಲ್ಯ'ದಲ್ಲಿ ಕೂಡ ಹಳ್ಳಿಯ ಸೊಗಡು, ಪರಿಸರದ ಚೌಕಟ್ಟಿನಲ್ಲಿ ಮನರಂಜನಾತ್ಮಕವಾಗಿ ಕಥೆ ಹೇಳಿರುವುದು ಉತ್ತಮ ಸಂಗತಿ. ಈ ಹೊಸ ಪ್ರಯೋಗಗಳೆಲ್ಲ ಗೆದ್ದವು ಎಂಬುದು ಪಾಸಿಟಿವ್ ಅಂಶ.

◆ **ವೈಯಕ್ತಿಕವಾಗಿ ನಿಮಗಿಷ್ಟವಾಗುವ ಕಥೆಗಳು?**

ನಾನು ಎಲ್ಲ ರೀತಿಯ ಸಿನಿಮಾಗಳನ್ನೂ ನೋಡುತ್ತೇನೆ. ಆದರೆ ನನ್ನನ್ನು ಬಹಳ ಆಕರ್ಷಿಸುವುದು, 'ಗೌರಿ ಗಣೇಶ', 'ಗಣೇಶ ಬಂದ', 'ರಾಮಾ ಶಾಮಾ ಭಾಮಾ'ದಂಥ ಸಿನಿಮಾಗಳು. ಇವುಗಳಿಗೆ 'ಎಕ್ಸ್‌ಪೈರಿ ಡೇಟ್' ಎಂಬುದೇ ಇಲ್ಲ. ಇಂದಿಗೂ ಈ ಸಿನಿಮಾಗಳನ್ನು ನೋಡಿ ನಗುತ್ತೇವೆ, ಎಂಜಾಯ್ ಮಾಡುತ್ತೇವೆ. ಈ ರೀತಿಯ ಸಿನಿಮಾಗಳು ಬರಬೇಕು ಹಾಗೂ ನಾನು ಅಂಥ ಸಿನಿಮಾಗಳ ಭಾಗವಾಗಬೇಕು ಎನ್ನುವುದು ನನ್ನ ಆಸೆ.

ಒಂದು ಟ್ರೆಂಡ್ ಇದೆ. ಒಬ್ಬರು ಒಂದು ಜಾನರ್ ಕಥೆ ತಂದು ಗೆದ್ದರೆ, ಎಲ್ಲರೂ ಅದೇ ರೀತಿಯ ಸಿನಿಮಾಗಳನ್ನು ಮಾಡುವುದು. ಸೀರಿಯಸ್ ಕಥೆಗಳನ್ನು ಹೇಳುತ್ತಾ, ಫಿಲಾಸಫಿ ಹೇಳುವ ಭರದಲ್ಲಿ ಬೋರಿಂಗ್ ಕೂಡ ಆಗಿಬಿಡುವ ಅಪಾಯವಿರುತ್ತದೆ. ನನ್ನ ಆದ್ಯತೆ ಏನಿದ್ದರೂ ಕುಟುಂಬದ ಎಲ್ಲರೂ ಯಾವುದೇ ಮುಜುಗರ ಇಲ್ಲದೆ ಕುಳಿತು ನೋಡುವಂಥ ಮನರಂಜನಾ ಸಿನಿಮಾ. ಇಂಥ ಸಿನಿಮಾಗಳನ್ನು ಜನ ಯಾವತ್ತೂ ಸೋಲಿಸಿಲ್ಲ. ಜನರಿಗೆ ಬೋರ್ ಹೊಡೆಸಬಾರದು ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರುತ್ತೇನೆ.

◆ **ಸದ್ಯ ನಿಮ್ಮ ಸಿನಿಮಾ ಹಾದಿ...**

ಏಪ್ರಿಲ್ 10ಕ್ಕೆ 'ವಿದ್ಯಾಪತಿ' ಬಿಡುಗಡೆಯಾಗುತ್ತಿದೆ. ಲೀಡ್‌ನಲ್ಲಿರುವ ಇನ್ನೊಂದು ಸಿನಿಮಾ ಯೋಜನೆಯಲ್ಲಿದೆ. ಇದರೊಂದಿಗೆ ಸಪೋರ್ಟಿಂಗ್ ಪಾತ್ರಗಳಲ್ಲಿಯೂ ತೊಡಗಿದ್ದೇನೆ. 'ಅಣ್ಣ ಫ್ರಂ ಮೆಕ್ಸಿಕೊ', 'ಫಾದರ್', 'ಯುವರ್ ಸಿನ್ಸಿಯರ್ಲಿ ರಾಮ್' ಮುಂತಾದ ಸಿನಿಮಾಗಳಲ್ಲಿದ್ದೇನೆ. ■